**<u>ಅಸಲು ದಾವಾ ಸಂಖ್ಯೆ- 05/2023</u>** **<u>ಡಿ.ಡಬ್ಲ್ಯೂ:-</u> 1**

ದಿನಾಂಕಃ **17-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:-ವಾದಿ ಪರ ವಕೀಲರಿಂದ:-</u>

ಸಾಕ್ಷಿಗೆ ದಿಃ 18-03-1959 ರ ಕ್ರಯ ಪತ್ರವನ್ನು ತೋರಿಸಿ ಸದರಿ ಕ್ರಯ ಪತ್ರವನ್ನು ಹನುಮಂತಪ್ಪ ಬಿನ್ ನಿಂಗಪ್ಪರವರಿಗೆ ನಿಂಗಮ್ಮ ಕೋಂ ಹನುಮಂತಪ್ಪ ಮತ್ತು ಗೌರಮ್ಮ ಕೋ ಕರಿಯಪ್ಪ ಪೂಜಾರ್ ರವರು ಸರ್ವೇ ನಂ.50ರ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಶುದ್ಧ ಕ್ರಯ ಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಂಗಮ್ಮ ಮತ್ತು ಗೌರಮ್ಮರವರು ಕ್ರಯ ಪತ್ರದ ಆಧಾರದ ಮೇಲೆ ಸರ್ವೇ ನಂ.50 ರ ಆಸ್ತಿಯನ್ನು ಹನುಮಂತಪ್ಪನಿಗೆ ಮಾರಾಟ ಮಾಡಿದ ಬಗ್ಗೆ ಮತ್ತು ನಿಂಗಮ್ಮ ಮತ್ತು ಗೌರಮ್ಮರವರು ಯಲ್ಲಮ್ಮರವರಿಗೆ ಸರ್ವೇ ನಂ.50 ರಲ್ಲಿ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ನಮೂದಾಗಿರುವ ಋಣಭಾರ ರಹಿತ ಪತ್ರವನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿಗೆ ಶ್ರೀ ಆದಿಶಕ್ತ್ಯಾತ್ಮಕ ಶ್ರೀ ಚಂಡಿಕೇಶ್ವರ ದೇವಸ್ಥಾನದವರು ನನ್ನ ಹೆಸರಿನಿಂದ ವಾದಿಗೆ ನೋಟೀಸ್ ಕೊಟ್ಟಿರುವ ಬಗ್ಗೆ ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಸದರಿ ನೋಟೀಸನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಕೆಂಪು ಇಟ್ಟಿಗೆಯ ಗೋಡೆಯ ಮನೆಯು ನನ್ನ ದೊಡ್ಡಪ್ಪನಾದ ಕರಿಯಪ್ಪರವರ ಮನೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದು ಸದರಿ ಛಾಯಾಚಿತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.